International Journal of Kannada Research 2022; 8(2): 14-16

International Journal of Kannada Research
www.kannadajournal.com

ISSN: 2454–5813
IJKR 2022; 8(2): 14-16
© 2022 IJKR
www.kannadajournal.com
Received: 10-02-2022
Accepted: 13-03-2022

**ಅನಿಲ್‌ಕುಮಾರ್.ಟಿ**
ಸಂಶೋಧನಾ ವಿದ್ಯಾರ್ಥಿ, ವಿದ್ಯುನ್ಮಾನ ಮಾಧ್ಯಮ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

**ಚಂದ್ರಶೇಖರ ಚೌಗಲಾ**
ಸಂಶೋಧನಾ ವಿದ್ಯಾರ್ಥಿ, ವಿದ್ಯುನ್ಮಾನ ಮಾಧ್ಯಮ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು

**Corresponding Author:**
**ಅನಿಲ್‌ಕುಮಾರ್.ಟಿ**
ಸಂಶೋಧನಾ ವಿದ್ಯಾರ್ಥಿ, ವಿದ್ಯುನ್ಮಾನ ಮಾಧ್ಯಮ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

# ವೀರಪ್ಪ ನಾಯಕ ಸಿನಿಮಾದಲ್ಲಿನ ದೇಶಪ್ರೇಮ ಮತ್ತು ಉತ್ತರ ಕರ್ನಾಟಕದ ಸೊಗಡಿನ ಕುರಿತು ಒಂದು ಅವಲೋಕನ

**ಅನಿಲ್‌ಕುಮಾರ್.ಟಿ, ಚಂದ್ರಶೇಖರ ಚೌಗಲಾ**

**ಸಂಶೋಧನಾ ಲೇಖನ ಸಾರಾಂಶ**
ವಿಶ್ವವೇ ಮೆಚ್ಚುವಂತಹ ಮಹನೀಯರು ಜನ್ಮತಾಳಿದ ಭೂಮಿ ಮತ್ತು ನಮ್ಮ ದೇಶದ ಪವಿತ್ರವಾದ ರಾಷ್ಟ್ರಧ್ವಜವನ್ನು ತಯಾರಿಸುವ ಪುಣ್ಯಭೂಮಿ ಕರ್ನಾಟಕದ ಧಾರವಾಡ ಜಿಲ್ಲೆಯ ಗರಗ ಎಂಬ ಹಳ್ಳಿ. ನಮ್ಮ ಭಾರತ ಸರ್ಕಾರವು ರಾಷ್ಟ್ರಧ್ವಜವನ್ನು ತಯಾರಿಸುವ ಕಾಯಕವನ್ನು ಈ ಹಳ್ಳಿಗೆ ಮಾತ್ರ ನೀಡಿದೆ. ಸುಂದರ ಬಾವುಟಗಳನ್ನು ತಯಾರಿಸಿ ಅವುಗಳಿಗೆ ಬಣ್ಣಗಳನ್ನು ಕೊಡುವುದೇ ಗರಗ ಜನತೆಯ ಕಾಯಕ. ನಾಯಕ ಮನೆತನದವರ ಮಮತೆ, ಸಮಾನತೆ, ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಶೌರ್ಯ, ಪರಿಶ್ರಮ, ಪರಾಕ್ರಮ ಮತ್ತು ತ್ಯಾಗಗಳಿಗೆ ಈ ಬಾವುಟವೇ ಪ್ರೇರಕ. ಈ ಊರಿನಲ್ಲಿ ತಯಾರಾದ ಬಾವುಟಗಳು ವಿಶ್ವದ ಎಲ್ಲಾ ಕಡೆ ತಲೆ ಎತ್ತಿ ಹಾರಾಡುತ್ತಿರುತ್ತವೆ. ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ನಾಯಕ ಮನೆತನದಲ್ಲಿ ಜನಿಸಿದವರೇ ಈ ವೀರಪ್ಪನಾಯಕ. ವಿದ್ಯೆ ಕಡಿಮೆ ವಿವೇಕ ಅಧಿಕ, ಶಿಸ್ತಿನ ಪಾಲಕ, ಊರಿಗೆ ಇವರೇ ನ್ಯಾಯಾಲಯ, ಬಡವರ ಕಣ್ಣೊರೆಸುವ ಪರೋಪಕಾರಿಯಾಗಿದ್ದ ವೀರಪ್ಪನಾಯಕ ಈ ಸಿನಿಮಾದ ಪ್ರಮುಖ ಕಥಾ ವಸ್ತು. ಈ ಸಿನಿಮಾದ ಮುಖ್ಯ ಕಥಾಹಂದರವೇನೆಂದರೆ, ಅಹಿಂಸೆಯ ಮೂಲಕ ಗಾಂಧಿ ತತ್ವಗಳ ಪ್ರಬಲ ಪ್ರತಿಪಾದಕನಾದ ವೀರಪ್ಪನಾಯಕನ (ಡಾ.ವಿಷ್ಣುವರ್ಧನ್) ಮಗ ಭಯೋತ್ಪಾದಕನಾಗಿ ಬದಲಾಗುವ ಕಥೆ. ಈ ಚಲನಚಿತ್ರದಲ್ಲಿ ಉತ್ತರ ಕರ್ನಾಟಕ ಜನರ ವೇಷಭೂಷಣ, ವೃತ್ತಿ, ದೇಶಪ್ರೇಮ, ದೇಶಾಭಿಮಾನ, ಹೆಣ್ಣಿನ ಮಹತ್ವ, ಸ್ವಾತಂತ್ರ್ಯೋತ್ಸವದ ಸಂಭ್ರಮದ ಪರಿಯನ್ನು ವೀಕ್ಷಕರ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಮತ್ತು ಯುವಜನತೆಯು ಭಯೋತ್ಪಾದನೆಗೆ ಬಲಿಯಾಗುವ ರೀತಿಯನ್ನು ಚಿತ್ರಿಸುವ ಮೂಲಕ ಭಯೋತ್ಪಾದನೆಯ ಕರಾಳ ಮುಖವನ್ನು ತೋರಿಸಲಾಗಿದೆ. ಹಾಗೂ ನಮ್ಮ ನಾಡು-ನುಡಿ, ನೆಲ-ಜಲ, ರಾಷ್ಟ್ರಧ್ವಜದ ಮಹತ್ವ ಮತ್ತು ಜನ್ಮ ನೀಡಿದ ತಾಯಿಯ ಬಗ್ಗೆ ತುಂಬಾ ಸೊಗಸಾಗಿ ವರ್ಣಿಸಿದ್ದಾರೆ. ವೀರಪ್ಪ ನಾಯಕ ಸಿನಿಮಾದಲ್ಲಿ ಮೂಡಿಬಂದಿರುವ ದೇಶಪ್ರೇಮವನ್ನು ತಿಳಿಯುವುದು, ಈ ಸಂಶೋಧನಾ ಪ್ರಬಂಧದ ಮುಖ್ಯ ಉದ್ದೇಶವೆಂದರೆ, ಉತ್ತರ ಕರ್ನಾಟಕದ ಸೊಗಡಿನ ಕುರಿತು ಅವಲೋಕಿಸುವುದು ಮತ್ತು ವೀರಪ್ಪ ನಾಯಕ ಚಿತ್ರದಲ್ಲಿನ ಮುಖ್ಯ ಪಾತ್ರಗಳ ಕುರಿತು ವಿಶ್ಲೇಷಿಸುವುದಾಗಿದೆ.

**ಪೀಠಿಕೆ**

1-ಜನವರಿ-1999 ರಲ್ಲಿ ತೆರೆಕಂಡ ವೀರಪ್ಪ ನಾಯಕ ಸಿನಿಮಾ ಅತೀ ಹೆಚ್ಚು ದಿನಗಳ ಕಾಲ ಪ್ರದರ್ಶನ ಕಂಡು ಕನ್ನಡ ಚಿತ್ರರಂಗದ ಇತಿಹಾಸದ ಪುಟಗಳಲ್ಲಿ ಹೊಸ ದಾಖಲೆಯನ್ನೇ ನಿರ್ಮಿಸಿತು. ಎಸ್.ನಾರಾಯಣ ನಿರ್ದೇಶನ ಮತ್ತು ನಿರ್ಮಾಣದಲ್ಲಿ ಮೂಡಿಬಂದ ಈ ಚಿತ್ರವು ಶತದಿನೋತ್ಸವವನ್ನು ಪೂರೈಸಿ ಕನ್ನಡ ಸಿನಿ ರಂಗದಲ್ಲೇ ಒಂದು ಹೊಸ ಮೈಲಿಗಲ್ಲನ್ನೇ ಸೃಷ್ಟಿಸಿತು. ಈ ಚಿತ್ರಕ್ಕೆ ರಾಜೇಶ್ ರಾಮನಾಥನ್ ಸಂಗೀತ ನಿರ್ದೇಶನ ಮಾಡಿದ್ದಾರೆ. ಡಾ.ವಿಷ್ಣುವರ್ಧನ್ ಮತ್ತು ಶ್ರುತಿ ಅವರು ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ಡಾ.ವಿಷ್ಣುವರ್ಧನ್ ಅವರು ಕನ್ನಡ ಚಲನಚಿತ್ರ ರಂಗ ಕಂಡಂತಹ ಅದ್ಭುತ ನಟ. ಸುಧೀರ್ಘ 40 ವರ್ಷಗಳ ಕಾಲ ಕನ್ನಡ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿ ತಮ್ಮ ಅಮೋಘ ನಟನೆಯಿಂದ ಕೋಟ್ಯಾಂತರ ಅಭಿಮಾನಿ ವರ್ಗವನ್ನು ಸಂಪಾದಿಸಿದ್ದಾರೆ. ಆಗಿನ ಕಾಲಕ್ಕೆ ಅತೀ ಹೆಚ್ಚು ಮಹಿಳ ಹೆಚ್ಚು ಮಹಿಳಾ ಅಭಿಮಾನಿ ಬಳಗವನ್ನೇ ಹೊಂದಿದ್ದರು. ವಿಷ್ಣುವರ್ಧನ್ ಅವರ ನಿಜವಾದ ಹೆಸರು ಸಂಪತ್‌ಕುಮಾರ್. ನಾರಾಯಣರಾವ್ ಮತ್ತು ಕಮಲಾಕ್ಷಮ್ಮ ದಂಪತಿಯ ಪುತ್ರನಾಗಿ 18-ಸೆಪ್ಟೆಂಬರ್-1950 ಮೈಸೂರಿನಲ್ಲಿ ಜನಿಸಿದರು. ವಿಷ್ಣುವರ್ಧನ್ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮೈಸೂರಿನ ಗೋಪಾಲಸ್ವಾಮಿ ಶಾಲೆಯಲ್ಲಿ ಹಾಗೂ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿದರು. ತಮ್ಮ ಪದವಿ ವ್ಯಾಸಂಗವನ್ನು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪೂರ್ಣಗೊಳಿಸಿದರು.

ಬಾಲ್ಯದಿಂದಲೂ ವಿಷ್ಣುವರ್ಧನ್ ಅವರು ಸಿನಿಮಾದಲ್ಲಿ ತುಂಬಾ ಆಸಕ್ತಿಯನ್ನು ಹೊಂದಿದ್ದರು. ಕನ್ನಡ ಚಿತ್ರರಂಗದಲ್ಲಿ ದೊಡ್ಡ ನಟನಾಗಬೇಕೆಂಬ ಅಪೂರ್ವ ಬಯಕೆಯಿಂದ ಕನ್ನಡ, ಮಲಿಯಾಳಂ, ಹಿಂದಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ 220 ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ನಟಿ ಭಾರತಿ ಅವರನ್ನು 17-ಫೆಬ್ರವರಿ-1975 ರಂದು ಬೆಂಗಳೂರಿನಲ್ಲಿ ವಿವಾಹವಾದರು.ಸಾಹಸಸಿಂಹ ಡಾ.ವಿಷ್ಣುವರ್ಧನ್ ರವರನ್ನು ಭಾರತೀಯ ಚಿತ್ರರಂಗದ ಫೀನಿಕ್ಸ್ ಎಂದು ಕರೆಯಲಾಗಿತ್ತು. ಡಾ.ವಿಷ್ಣುವರ್ಧನ್ ರವರು 30-ಡಿಸೆಂಬರ್-2009 ರಂದು ಹೃದಯಾಘಾತದಿಂದ ನಿಧನರಾದರು.

**ಸಿನಿಮಾ ರಂಗ ಪ್ರವೇಶ**

ಡಾ.ವಿಷ್ಣುವರ್ಧನ್ ಅವರು ಮೊಟ್ಟಮೊದಲ ಬಾರಿಗೆ ಬಾಲ ನಟನಾಗಿ 1955ರಲ್ಲಿ ಶಿವಶರಣ ನಂಬೇಯಕ್ಕ ಎಂಬ ಸಿನಿಮಾದಲ್ಲಿ ನಟಿಸುತ್ತಾರೆ. ನಂತರ 1956 ರಲ್ಲಿ ಕೋಕಿಲ ವಾಣಿ ಎಂಬ ಮತ್ತೊಂದು ಸಿನಿಮಾದಲ್ಲಿ ನಟಿಸುತ್ತಾರೆ. ನಂತರ ಎಸ್.ಎಲ್.ಭೈರಪ್ಪನವರ ಕಾದಂಬರಿ ಆಧಾರಿತ ಗಿರೀಶ್ ಕಾರ್ನಾಡ್ ನಿರ್ದೇಶನದ ವಂಶವೃಕ್ಷ ಎಂಬ ಸಿನಿಮಾದಲ್ಲಿ ಒಂದು ಸಣ್ಣ ಪೋಷಕ ಪಾತ್ರವನ್ನು ನಿಭಾಯಿಸುತ್ತಾರೆ.

**ನಾಯಕನಟನಾಗಿ ವಿಷ್ಣುವರ್ಧನ್**

1971 ರಲ್ಲಿ ಆಗಿನ ಕಾಲದ ಶ್ರೇಷ್ಠ ನಿರ್ದೇಶಕರಾದ ಪುಟ್ಟಣ್ಣ ಕಣಗಾಲ್ ಅವರು ನಾಗರಹಾವು ಎಂಬ ಶೀರ್ಷಿಕೆಯಡಿ ಸಿನಿಮಾವನ್ನು ನಿರ್ಮಿಸಲು ಹೊಸ ಪ್ರತಿಭೆಗಳನ್ನು ಹುಡುಕುತ್ತಿದ್ದರು. ವಿಷ್ಣುವರ್ಧನ್ ಅವರ ಸದೃಢ ಮೈಕಟ್ಟು, ಬೆಂಕಿಯ ಕಣ್ಣುಗಳು, ಸಂಭಾಷಣೆಯ ಗತ್ತು ಇವೆಲ್ಲವನ್ನೂ ಕಂಡ ಪುಟ್ಟಣ್ಣ ಕಣಗಾಲ್ ಅವರು ತಮ್ಮ ನಾಗರಹಾವು ಸಿನಿಮಾಗೆ ನಾಯಕನನ್ನಾಗಿ ಆಯ್ಕೆ ಮಾಡುತ್ತಾರೆ. 1972 ರಲ್ಲಿ ನಾಗರ ಹಾವು ಸಿನಿಮಾ ಬಿಡುಗಡೆಯಾಗಿ ಅಪಾರ ಯಶಸ್ಸನ್ನು ಕಂಡಿತು. ಮತ್ತು ಕನ್ನಡ ಚಿತ್ರರಂಗದ ಆಂಗ್ರಿ ಯಂಗ್‌ಮ್ಯಾನ್ ಎಂದು ಕರೆಯಲ್ಪಟ್ಟರು. ಈ ಚಿತ್ರದಲ್ಲಿನ ವಿಷ್ಣುವರ್ಧನ್ ಅವರ ಖಡಕ್ ಡೈಲಾಗ್‌ಗಳು ದುರಂತ ಪ್ರೇಮ ಕಥೆ ಇವೆಲ್ಲವೂ ಸಿನಿಮಾ ಗೆಲುವಿಗೆ ಕಾರಣವಾಯಿತು. ಅವರು ವಿಭಿನ್ನ ಪ್ರಕಾರಗಳಲ್ಲಿ ವೈವಿಧ್ಯಮಯ ಪಾತ್ರಗಳಲ್ಲಿ ನಟಿಸಿದ್ದಾರೆ.

**ತಾರಾ ಬಳಗ**

ವೀರಪ್ಪ ನಾಯಕ ಜೀವನಚರಿತ್ರೆಯ ಚಲನಚಿತ್ರವನ್ನು ಎಸ್ ನಾರಾಯಣ ಅವರು ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ವಿಷ್ಣುವರ್ಧನ್ ಮತ್ತು ಶೃತಿ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಹೇಮಾ ಚೌಧರಿ, ಸುಧೀರ್, ಶೋಭರಾಜ್, ಕೋಟೆ ಪ್ರಭಾಕರ್, ರೇಣುಕಾ ಪ್ರಸಾದ್, ಭವ್ಯಶ್ರೀ ಮುಂತಾದವರು ಪೋಷಕ ಪಾತ್ರದಲ್ಲಿ ನಟಿಸಿದ್ದಾರೆ. ರಾಜೇಶ್ ರಾಮನಾಥ್ ಸಂಗೀತ ಸಂಯೋಜಿಸಿದ್ದಾರೆ. ಈ ಸಿನಿಮಾದಲ್ಲಿ ಪ್ರತಿಯೊಬ್ಬ ಕಲಾವಿದನೂ ಅವರವರ ಪಾತ್ರಗಳಿಗೆ ಜೀವ ತುಂಬಿ ಅಮೋಘ ಅಭಿನಯದಿಂದ ತಮ್ಮ ತಮ್ಮ ಪಾತ್ರಗಳಿಗೆ ನ್ಯಾಯವನ್ನು ಒದಗಿಸಿದ್ದಾರೆ.

**ದೇಶಭಕ್ತಿ ಮೂಡಿಸುವ ಗೀತೆಗಳು**

ಧಾರವಾಡ ಜಿಲ್ಲೆಯ ಹಳ್ಳಿಯೊಂದರ ದೇಶಪ್ರೇಮಿಯ ಕಥೆಯನ್ನು ವೀರಪ್ಪ ನಾಯಕ ಚಿತ್ರದಲ್ಲಿ ಕಾಣಬಹುದು. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು ಪಾಲಿಸುತ್ತಿದ್ದ ವೀರಪ್ಪ ನಾಯಕನ ಕಥೆಯನ್ನು ಖ್ಯಾತ ನಿರ್ದೇಶಕ ಎಸ್.ನಾರಾಯಣ್ ಅವರು ತೆರೆಯ ಮೇಲೆ ಅತ್ಯದ್ಭುತವಾಗಿ ತೋರಿಸಿದ್ದಾರೆ. ವೀರಪ್ಪ ನಾಯಕ ಸಿನಿಮಾದಲ್ಲಿನ ಗೀತೆಗಳು ಸಿನಿಪ್ರಿಯರಿಗೆ ಸಂಗೀತದ ರಸದೌತಣವನ್ನು ಉಣಿಸುತ್ತವೆ. ಪ್ರತಿ ಗೀತೆಗಳೂ ಕನ್ನಡ ನೆಲ, ನುಡಿ, ಉತ್ತರ ಕರ್ನಾಟಕದ ಸೊಗಡನ್ನು ಬಿಂಬಿಸುತ್ತವೆ. ಹಾಡುಗಳಲ್ಲಿ ನೃತ್ಯಕ್ಕೆ ಬಳಸಲಾದ ಉಡುಗೆ ತೊಡುಗೆಗಳು ಆ ಪ್ರದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ರಾಜೇಶ್ ರಾಮನಾಥನ್ ಅವರ ಸಂಗೀತ ಪ್ರತಿಯೊಬ್ಬ ದೇಶಪ್ರೇಮಿಯನ್ನು ಸಂತಸಪಡಿಸುತ್ತವೆ. "ಈ ಮಣ್ಣಿನ ಹೆಮ್ಮೆಯ ಮಗನಿವನು ಕನ್ನಡಾಂಬೆಯ ಪ್ರೇಮದ ಕುಡಿಯಿವನು" ಈ ಗೀತೆಯು ಪ್ರತಿಯೊಬ್ಬ ಪ್ರೇಕ್ಷಕನ ಮನದಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ.ಮತ್ತು ದೀನ ದಲಿತರ ಬಗ್ಗೆ ಕಾಳಜಿಯನ್ನು ತುಂಬುತ್ತದೆ. ಪ್ರಮುಖವಾಗಿ ದಿವಂಗತ ಎಸ್.ಪಿ.ಬಾಲಸುಬ್ರಮಣ್ಯ ಅವರ ಕಂಠಸಿರಿಯಲ್ಲಿ ಮೂಡಿಬಂದಿರುವ "ಭಾರತಾಂಬೆ ನಿನ್ನ ಜನ್ಮದಿನ ಭಾರತೀಯರ ಶೌರ್ಯ ಮೆರೆದ ದಿನ" ಈ ಗೀತೆಯು ಕೇಳಿದ ಪ್ರತಿಯೊಬ್ಬ ಭಾರತೀಯನಿಗೂ ಸ್ವಾತಂತ್ರ್ಯೋತ್ಸವದ ರೋಮಾಂಚನವನ್ನು ಉಂಟು ಮಾಡುತ್ತದೆ. ಮತ್ತು ಭವ್ಯ ಭಾರತದ ಹಿರಿಮೆ-ಗರಿಮೆಗಳನ್ನು ಸಾರಿ ಹೇಳುತ್ತದೆ.

**ರಾಷ್ಟ್ರಧ್ವಜದ ಮಹತ್ವ**

ರಾಷ್ಟ್ರಧ್ವಜನ್ನು ಗೌರವಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯವಾಗಿದೆ.

ದೇಶದ ದಿಗ್ವಿಜಯದ ಸಂಕೇತ, ಆತ್ಮಗೌರವದ ಪ್ರತೀಕಾರ, ಸಮಾನತೆಯ ಪ್ರತಿರೂಪವಾದ ನಮ್ಮ ರಾಷ್ಟ್ರಧ್ವಜದ ಮಹತ್ವವನ್ನು ಈ ಸಿನಿಮಾದಲ್ಲಿ ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ಭಾರತದ ನೆಲದಲ್ಲಿ ಸಾವಿರಾರು ಹಳ್ಳಿಗಳು ಹಲವಾರು ಭಾಷೆಗಳಿದ್ದರೂ ಕನ್ನಡಿಗರಿಗೆ ಮಾತ್ರ ನಮ್ಮ ರಾಷ್ಟ್ರಧ್ವಜವನ್ನು ನೇಯುವ ಭಾಗ್ಯ ದೊರೆತಿದೆ ಎಂಬುದನ್ನು ಈ ಸಿನಿಮಾದಲ್ಲಿ ತಿಳಿಸಿಕೊಟ್ಟಿದ್ದಾರೆ.

**ಉತ್ತರ ಕರ್ನಾಟಕ ಸಂಸ್ಕೃತಿಯ ಅನಾವರಣ**

ತುಂಗಭದ್ರಾ ನದಿಯಿಂದ ಮಹಾರಾಷ್ಟ್ರದ ಜತ್ತ ಗಡಿ ಪ್ರದೇಶದವರೆಗೂ ಉತ್ತರ ಕರ್ನಾಟಕದ ಸೊಗಡು ಪಸರಿಸಿದೆ. ಈ ಪ್ರದೇಶವು ತನ್ನದೇಯಾದ ಸಂಸ್ಕೃತಿ, ವೇಷಭೂಷಣ, ಆಹಾರ ಪದ್ಧತಿ, ಭಾಷಾಶೈಲಿ, ಆಚಾರ-ವಿಚಾರಗಳನ್ನು ಹೊಂದಿದೆ. ಪ್ರಸ್ತುತ ಈ ಸಿನಿಮಾದಲ್ಲಿ ಉತ್ತರ ಕರ್ನಾಟಕದ ಸಂಸ್ಕೃತಿಯನ್ನು ತುಂಬಾ ವಿಭಿನ್ನವಾಗಿ ಅನಾವರಣಗೊಳಿಸಲಾಗಿದೆ. ಈ ಸಿನಿಮಾದಲ್ಲಿನ ಕಲಾವಿದರು ಧೋತಿ, ಪೇಟಾ (ಪಟಕಾ), ಇಳಕಲ್ ಸೀರೆ, ಕೊಲ್ಲಾಪುರಿ ಚಪ್ಪಲಿಗಳನ್ನು ಧರಿಸುವ ಮೂಲಕ ಉತ್ತರ ಕರ್ನಾಟಕದ ಸೊಗಡನ್ನು ತೋರಿಸಿಕೊಟ್ಟಿದ್ದಾರೆ.

**ಮೈನವಿರೇಳಿಸುವ ದೃಶ್ಯಗಳು**

ವೀರಪ್ಪನಾಯಕ ಸಿನಿಮಾದಲ್ಲಿ ಪ್ರತಿಯೊಂದು ದೃಶ್ಯಗಳು ದೇಶಪ್ರೇಮ, ದೇಶಾಭಿಮಾನ, ಸ್ವಾತಂತ್ರ್ಯ ಸಮಾನತೆಗಳನ್ನು ಬಿಂಬಿಸುತ್ತವೆ. ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ಸಮಯದಲ್ಲಿ ರಾಷ್ಟ್ರಧ್ವಜಕ್ಕೆ ಬೆಂಕಿ ಹಚ್ಚಲು ಮುಂದಾದ ಶೋಭರಾಜ್ ರವರ ಕೈಯನ್ನು ಕತ್ತರಿಸುವ ದೃಶ್ಯವನ್ನು ಕಂಡ ಪ್ರೇಕ್ಷಕನ ದೇಹದಲ್ಲಿ ಸರಾಗವಾದ ರಕ್ತಪರಿಚಲನೆಯನ್ನು ಉಂಟುಮಾಡುತ್ತದೆ. ಎದೆಯಲ್ಲಿ ದೇಶಾಭಿಮಾನದ ಹೊಳೆಯನ್ನು ಹರಿಸುತ್ತದೆ.ಮತ್ತು ಪ್ರತಿಯೊಂದು ದೃಶ್ಯಗಳು ದೇಶಪ್ರೇಮದ ಕಿಚ್ಚನ್ನು ಹೊತ್ತಿಸುತ್ತವೆ. ಈ ದೃಶ್ಯವು ಪ್ರೇಕ್ಷಕರ ಮನದಲ್ಲಿ ಎಂದೂ ಮರೆಯಲಾಗದ ದೃಶ್ಯವಾಗಿ ಉಳಿದುಕೊಂಡಿದೆ. ಭಯೋತ್ಪಾದಕನಾಗಿದ್ದ ತನ್ನ ಮಗನನ್ನೇ ಶೃತಿಯವರು ಪೋಲೀಸರಿಗೆ ಒಪ್ಪಿಸುವ ದೃಶ್ಯವಾಗಲಿ, ಗಾಂಧಿ ತತ್ವಗಳನ್ನು ಪಾಲಿಸುತ್ತಿದ್ದ ವೀರಪ್ಪನಾಯಕನ ಮಗನು ಭಯೋತ್ಪಾದಕನಾಗಿ ಬದಲಾಗಿ ತನ್ನ ತಾಯಿಯನ್ನೇ ಕೊಲ್ಲುತ್ತಾನೆ. ಈ ವಿಷಯ ತಿಳಿದ ವೀರಪ್ಪನಾಯಕ ,ಸಂಬಂಧಗಳಿಗಿಂತ ದೇಶಪ್ರೇಮವೇ ಹೆಚ್ಚೆಂದು ಉಗ್ರಗಾಮಿಯಾದ ತನ್ನ ಮಗನ ರುಂಡ-ಮುಂಡಗಳನ್ನೇ ಕತ್ತರಿಸುವ ದೃಶ್ಯಗಳು ದೇಶಾಭಿಮಾನವನ್ನು ಎತ್ತಿ ತೋರಿಸುತ್ತವೆ. ತನ್ನ ಕುಟುಂಬಕ್ಕಿಂತ ದೇಶವೇ ಮುಖ್ಯ, ದೇಶಕ್ಕೆ ಮತ್ತು ತನ್ನ ತಾಯ್ನಾಡಿಗೆ ದ್ರೋಹ ಬಗೆಯುವವರು ಯಾರೇ ಆಗಿದ್ದರು ಸಹಾ ಅವರು ದೇಶದ್ರೋಹಿಗಳು ಎಂಬುದನ್ನು ಈ ಸಿನಿಮಾದಲ್ಲಿ ತುಂಬಾ ಅರ್ಥಪೂರ್ಣವಾಗಿ ತಿಳಿಸಲಾಗಿದೆ. ತಾಯಿಗೆ ತನ್ನ ಮಗನ ಮೇಲಿನ ಮಮತೆಗಿಂತ ದೇಶಪ್ರೇಮವೇ ಹೆಚ್ಚು ಎಂಬುದನ್ನು ಮನಮುಟ್ಟುವಂತೆ ಈ ಸಿನಿಮಾದಲ್ಲಿ ತೋರಿಸಲಾಗಿದೆ. ಸಿನಿಮಾದಲ್ಲಿ ಈ ದೃಶ್ಯ ಭಿತ್ತರವಾಗುತ್ತಿದ್ದಂತೆ ಪ್ರತಿ ತಾಯಿಯ ಕಣ್ಣಾಲಿಗಳು ತೇವವಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ ಅಗಾಧವಾದ ದೇಶಪ್ರೇಮವನ್ನು ಹೊತ್ತು

ಸಾಗಿರುವ ಈ ಸಿನಿಮಾವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

**ಉದ್ದೇಶಗಳು**

ಈ ಸಿನಿಮಾ ಬಹು ಮುಖ್ಯವಾಗಿ ಅತ್ಯದ್ಭುತವಾದ ಕಥೆಯನ್ನು ಒಳಗೊಂಡಿದ್ದು, ಭಾರತ ದೇಶ, ರಾಷ್ಟ್ರಧ್ವಜ, ಕನ್ನಡ ನಾಡು-ನುಡಿ, ಮತ್ತು ಹೆಣ್ಣಿನ ಮಹತ್ವ ಹಾಗೂ ದೇಶಾಭಿಮಾನಗಳ ಬಗ್ಗೆ ತಿಳಿಸಿಕೊಟ್ಟಿದೆ. ಈ ಲೇಖನದ ಮುಖ್ಯ ಉದ್ದೇಶವೇನೆಂದರೆ, ವೀರಪ್ಪ ನಾಯಕ ಸಿನಿಮಾದಲ್ಲಿನ ದೇಶಪ್ರೇಮದ ಬಗ್ಗೆ ತಿಳಿಯುವುದು, ಉತ್ತರ ಕರ್ನಾಟಕ ಸೊಗಡಿನ ಬಗ್ಗೆ ತಿಳಿಯುವುದಾಗಿದೆ. ಹಾಗೂ ಇಂದಿನ ಪೀಳಿಗೆಗೆ ದೇಶಪ್ರೇಮದ ಬಗ್ಗೆ ತಿಳಿಸುವುದಾಗಿದೆ.

**ಅಭಿನಯಕ್ಕೆ ಸಂದ ಪ್ರಶಸ್ತಿ**

ಡಾ.ವಿಷ್ಣುವರ್ಧನ್ ರವರು ಕನ್ನಡ ಚಿತ್ರರಂಗ ಕಂಡಂತಹ ಅತ್ಯದ್ಭುತ ಕಲಾವಿದ. ನಟನೆಯಲ್ಲಿ ಅವರಿಗೆ ಅವರೇ ಸಾಟಿ. ಎಂತಹ ಪಾತ್ರಗಳನ್ನಾದರೂ ಲೀಲಾಜಾಲವಾಗಿ ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಈ ಸಿನಿಮಾದಲ್ಲಿ ವಿಷ್ಣುವರ್ಧನ್ ರವರು ಒಬ್ಬ ಅಪ್ಪಟ ದೇಶ ಪ್ರೇಮಿಯಾದ ವೀರಪ್ಪನಾಯಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಡಾ.ವಿಷ್ಣುವರ್ಧನ್ ಅವರ ಈ ಪಾತ್ರದ ಅಮೋಘ ಅಭಿನಯಕ್ಕೆ ರಾಜ್ಯ ಪ್ರಶಸ್ತಿ ಸಹ ಒಲಿದು ಬಂದಿದೆ.

**ಪುತ್ಥಳಿ ಅನಾವರಣ**

ಅಭಿನವ ಭಾರ್ಗವ, ಸಾಹಸಸಿಂಹ ಡಾ.ವಿಷ್ಣುವರ್ಧನ್ ರವರು ನಿರ್ವಹಿಸಿರುವ ವೀರಪ್ಪನಾಯಕನ ಪಾತ್ರ ಇಂದಿಗೂ ಕನ್ನಡ ನಾಡಿನ ಜನರ ಮನದಲ್ಲಿ ಹಚ್ಚ ಹಸಿರಾಗಿ ಉಳಿದುಕೊಂಡಿದೆ. ಡಾ.ವಿಷ್ಣುವರ್ಧನ್ ಅಭಿನಯದ ವೀರಪ್ಪ ನಾಯಕ ಪಾತ್ರವನ್ನು ಜೀವಂತವಾಗಿರಿಸಲು ಅವರ ಅಭಿಮಾನಿಗಳು ಪುತ್ಥಳಿಯನ್ನು ನಿರ್ಮಿಸಿದ್ದಾರೆ. ವರ್ಣಸಿಂಧು ಎಂಬ ಶಿಲ್ಪಿಯು ಈ ಪುತ್ಥಳಿಗೆ ಜೀವ ನೀಡಿದ್ದಾರೆ. ಈ ವೀರಪ್ಪ ನಾಯಕ ಪಾತ್ರವನ್ನು ಪುತ್ಥಳಿ ರೂಪದಲ್ಲಿ ಜೀವಂತವಾಗಿಡುವ ಪ್ರಯತ್ನಕ್ಕೆ ಡಾ.ವಿಷ್ಣು ಸೇನಾ ಸಮಿತಿ ಅಗತ್ಯವಿರುವ ಹಣಕಾಸು ನೆರವು ನೀಡಿದೆ. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬ್ರಹ್ಮಸಂದ್ರದಲ್ಲಿ ಪುತ್ಥಳಿಯನ್ನು ಅನಾವರಣಗೊಳಿಸಲಾಗಿದೆ.

**ಉಪಸಂಹಾರ**

ದೇಶಪ್ರೇಮ ಮತ್ತು ಉತ್ತರ ಕರ್ನಾಟಕದ ಸೊಗಡನ್ನು ಹೊತ್ತು ಮೂಡಿಬಂದಿರುವ ವೀರಪ್ಪನಾಯಕ ಸಿನಿಮಾ ಕನ್ನಡ ಸಿನಿರಂಗದ ದೇಶಭಕ್ತಿ ಸಿನಿಮಾಗಳ ಸರದಿಯಲ್ಲಿ ಇಂದಿಗೂ ಪ್ರಥಮ ಸ್ಥಾನ ಪಡೆದುಕೊಂಡಿದೆ. ಡಾ.ವಿಷ್ಣುವರ್ಧನ್ ರವರು ವೀರಪ್ಪನಾಯಕನ ಪಾತ್ರಕ್ಕೆ ತಮ್ಮ ಅಮೋಘ ಅಭಿನಯದ ಮೂಲಕ ಸರಿಯಾದ ನ್ಯಾಯವನ್ನು ಒದಗಿಸಿದ್ದಾರೆ.

ಮತ್ತು ಶೃತಿಯವರು ವೀರಪ್ಪನಾಯಕನ ಹೆಂಡತಿಯ ಪಾತ್ರವನ್ನು ತುಂಬಾ ಸೊಗಸಾಗಿ ನಿಭಾಯಿಸಿದ್ದಾರೆ. ಹಾಗೂ ಉಳಿದೆಲ್ಲಾ ಸಹ ಕಲಾವಿದರು ಸಹ ಅತ್ಯುತ್ತಮ ನಟನೆಯನ್ನು ತೋರಿದ್ದಾರೆ. 1-ಜನವರಿ-1999 ರಂದು ಬಿಡುಗಡೆಯಾದ ಸಿನಿಮಾ ಅಂದಿನಿಂದ ಇಂದಿಗೂ ಪ್ರೇಕ್ಷಕನ ಮನದಲ್ಲಿ ಜೀವಂತ ಸ್ಥಾನವನ್ನು ಪಡೆದುಕೊಂಡಿದೆ. ವೀರಪ್ಪನಾಯಕ ಸಿನಿಮಾದಲ್ಲಿ ದೇಶಪ್ರೇಮ, ದೇಶಾಭಿಮಾನ, ರಾಷ್ಟ್ರಧ್ವಜ, ಭಾಷೆ ಮತ್ತು ಉತ್ತರ ಕರ್ನಾಟಕದ ಸಂಸ್ಕೃತಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಸ್ವಾತಂತ್ರ್ಯದ ನಂತರವೂ ಯುವಕರು ಆಸೆ, ಆಮಿಷಗಳಿಗೆ ಒಳಗಾಗಿ ಹೇಗೆ ಭಯೋತ್ಪಾದಕರ ಜೊತೆ ಸೇರಿ ಯಾವ ರೀತಿಯ ದುಷ್ಕೃತ್ಯಗಳನ್ನು ಎಸಗುತ್ತಾರೆ ಮತ್ತು ಯುವಕರ ಮನಸ್ಸಲ್ಲಿ ಮೋಸ, ಮದ-ಮತ್ಸರ, ದ್ವೇಷ ಇತ್ಯಾದಿಗಳನ್ನು ತುಂಬಿ ಹೇಗೆ ತಮ್ಮೆಡೆಗೆ ಸೆಳೆಯುತ್ತಾರೆ ಎಂಬುದನ್ನು ತೋರಿಸಲಾಗಿದೆ. ರಾಷ್ಟ್ರ ಮತ್ತು ರಾಷ್ಟ್ರಧ್ವಜವನ್ನು ಗೌರವಿಸುವುದು ಪ್ರತಿಯೊಬ್ಬ ಭಾರತೀಯನ ಮೊದಲ ಕರ್ತವ್ಯವೆಂದು ಹೇಳಲಾಗಿದೆ. ಈ ಸಿನಿಮಾದಲ್ಲಿ ತಾಯಿಯ ಪ್ರೀತಿ-ವಾತ್ಸಲ್ಯ ಮತ್ತು ಹೆಣ್ಣಿನ ತ್ಯಾಗದ ಬಗ್ಗೆ ತುಂಬಾ ಸೊಗಸಾಗಿ ವರ್ಣಿಸಲಾಗಿದೆ. ದೇಶಪ್ರೇಮವನ್ನು ಅತ್ಯಂತ ಪರಿಣಾಮಕಾರಿಯಾಗಿ ತೋರಿದ ಈ ಸಿನಿಮಾ ಇಂದಿಗೂ ಸಿನಿಪ್ರಿಯರು ಮತ್ತು ದೇಶಪ್ರೇಮಿಗಳಿಗೆ ಅಚ್ಚು-ಮೆಚ್ಚಾಗಿ ಉಳಿದಿದೆ ಸಿನಿಮಾ ಅತ್ಯಂತ ಪರಿಣಾಮಕಾರಿಯಾದ ಮಾಧ್ಯಮ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಯುವಜನತೆ ಸಿನಿಮಾ ಜಗತ್ತಿನ ತಮ್ಮ ತಮ್ಮ ನೆಚ್ಚಿನ ಹೀರೋಗಳನ್ನು ಅನುಸರಿಸುತ್ತಿದ್ದಾರೆ. ಆದ್ದರಿಂದ ದೇಶಪ್ರೇಮದ ಕಥೆಯನ್ನಾಧರಿಸಿ ಸಿನಿಮಾಗಳನ್ನು ನಿರ್ಮಿಸುವುದರ ಮೂಲಕ ಯುವಜನತೆಯಲ್ಲಿ ದೇಶಾಭಿಮಾನ, ದೇಶಪ್ರೇಮ, ಆತ್ಮಗೌರವ ಮತ್ತು ನಮ್ಮ ಸಂಸ್ಕೃತಿಗಳನ್ನು ಬೆಳೆಸಿ ಉಳಿಸಬೇಕಿದೆ.

**ಗ್ರಂಥಸೂಚಿ**


1. ಡಾ.ಬಿ.ವಿ.ವೈಕುಂಠರಾಜು. ಸಿನಿಮಾತು (ಐವತ್ತು ವರ್ಷಗಳ ಕನ್ನಡ ಚಿತ್ರರಂಗ), 2004.
2. ಪ್ರಜಾವಾಣಿ ಪತ್ರಿಕೆಯ *ಸಿನಿಮಾ ಪುರವಣಿ* ಗಂಗಾಧರಯ್ಯ ಮೊದಲಿಯಾರ್ ಲೇಖನ (2-ಜನವರಿ-1999)
3. ಉದಯವಾಣಿ ಪತ್ರಿಕೆಯ ಬಿ.ಗಣಪತಿ ರವರ ವಿಮರ್ಶೆ (2-ಜನವರಿ-1999)
4. ಡಾ.ವಿಷ್ಣು ಸೇನಾ ಸಮಿತಿಯ ಸಂಧರ್ಶನ
5. ಅರಗಿಣಿ ಮಾಸಿಕ ಪುರವಣಿ (ಜನವರಿ-1999)
6. ಗಂಗಾಧರ ಮೊದಲಿಯಾರ್, ಕನ್ನಡ ಸಿನಿಮಾ
7. ಮಾನಸ. ಕನ್ನಡ ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ ಸಂಶೋಧನ ಗ್ರಂಥ. 2008.
8. ವೀರಪ್ಪನಾಯಕ ಕನ್ನಡ ಸಿನಿಮಾ